ಅಥವಾ ಇದ್ದಿಲು ಸರಬರಾಜು ಮಾಡುವ ವ್ಯವಸ್ಥೆ ಮಾಡುತ್ತೇವೆ. ಕಲ್ಲಿದ್ದಲನ್ನು ಸರಬರಾಜು ಮಾಡುವ ವಿಷಯದಲ್ಲಿ ನಮಗೂ ಕಂಪನಿಯವರಿಗೂ ಯಾವ ಅಗ್ರಿಮೆಂಟ್ ಆಗಿಲ್ಲ, ಆಗಿದ್ದರೆ ಕಂಪನಿಯವರಿಗೆ ಮಾತ್ರ ಆಗಿದೆ. ಪ್ಯಾಡಿ ಬ್ರಿಕೇಟ್‌ಗಳನ್ನು ಐದು ವ್ಯಾಗನ್‌ಗಳಷ್ಟು ತರಿಸಿಟ್ಟಿದ್ದೇನೆ. ಇನ್ನೊಂದೆರಡು ವ್ಯಾಗನ್‌ಗಳನ್ನು ತರಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಇವುಗಳನ್ನು ಎಷ್ಟು ತರಸಲಿಕ್ಕೆ ಸಾಧ್ಯವೊ ಅಷ್ಟನ್ನು ತರಿಸಿಡುವುದಕ್ಕೆ ಸರ್ವ ಪ್ರಯತ್ನವನೂ ಮಾಡುತ್ತೇನೆ.

ಇನ್ನು ಪ್ಯಾಡಿ-ಹಸ್ಕ್ ಬ್ರಿಕೇಟ್‌ಗಳನ್ನು ತಯಾರು ಮಾಡತಕ್ಕದು ಇನ್ನೂ ಪ್ರಾರಂಭವಾಗಿಲ್ಲ. ಇದಕ್ಕೆ ಸಂಬಂಧಪಟ್ಟ ಎಸ್ಟಿಮೇಟ್ ಮಂಜೂರು ಮಾಡಿದ್ದೇನೆ. ಮಿಷಿನರಿ ತರಬೇಕು. ಇದು ಒಂದು ತಿಂಗಳೊಳಗೆ ಆಗುತ್ತದೋ ಅಥವಾ ಇಲ್ಲವೋ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಬೇರೆ ಕಡೆಯಿಂದ ಕೊಂಡು ತರುವುದಕ್ಕೆ ನಾವು ಸರ್ವ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಬಹು ಮುಖ್ಯವಾಗಿ ವಿದ್ಯುಚ್ಛಕ್ತಿಯನ್ನು ಇದಕ್ಕೆ ಕೊಡುತ್ತಾರೆಯೇ ಎಂದು ಕೇಳಿದರು. ವಿದ್ಯುಚ್ಛಕ್ತಿ ಮಂತ್ರಿಗಳು ವಿದ್ಯುಚ್ಛಕ್ತಿ ಕೊಟ್ಟರೆ ನನ್ನ ಅಭ್ಯಂತರವೇನೂ ಇಲ್ಲ ಆದರೆ ಇಪ್ಪೊತ್ತಿನ ದಿವಸ ವ್ಯವಸಾಯಗಾರರಿಗೇ ಸಾಕಷ್ಟು ವಿದ್ಯುಚ್ಛಕ್ತಿ ಇಲ್ಲದಿರುವಾಗ ಇದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೋ ಗೊತ್ತಿಲ್ಲ. ಒಟ್ಟಿನಲ್ಲಿ ಈ ಪ್ರಶ್ನೆಯನ್ನು ಅವರು ಮತ್ತು ನಾವು ಕೂತುಕೊಂಡು ಬಗೆಹರಿಸಬೇಕಾಗಿದೆ. ಈ ವಿಷಯದಲ್ಲಿ ನಾವು ನಮ್ಮ ಜವಾಬ್ದಾರಿಯನ್ನು ಒದರಿಕೊಂಡು ಕೂತುಕೊಳ್ಳುವುದಿಲ್ಲ. ಈ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳುತ್ತೇವೆ. ಅದರಂತೆ ಅವರೂ ಹೊತ್ತುಕೊಳ್ಳಬೇಕು. ಮತ್ತು ಅವರೂ ಸಹ ಸ್ವಲ್ಪ ಸುಧಾರಿಸಿಕೊಳ್ಳಬೇಕು. ಇನ್ನು ಒಂದೆರಡು ವರ್ಷಗಲ್ಲಿಯೇ ಈ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಲು ನಾವುಗಳೆಲ್ಲಾ ಸೇರಿಕೊಂಡು ಸರ್ವ ಪ್ರಯತ್ನ ಮಾಡೋಣ.

(i) *re: mistake in assigning marks to question of VII standard in Bangalore North Taluk*

ಶ್ರೀ ಮಳ್ಳೂರು ಆನಂದರಾವ್, (ರಾಜಾಜಿನಗರ).—ಬೆಂಗಳೂರು ಉತ್ತರ ಜಿಲ್ಲೆಯಲ್ಲಿನ ೭ನೇ ತರಗತಿಯ ಪ್ರತಿಯೊಂದು ಸಾರ್ವತ್ರಿಕ ಪರೀಕ್ಷೆಯಲ್ಲಿ ಅಂಕಗಳನ್ನು ಗೊತ್ತುಪಡಿಸುವಲ್ಲಿ ಭಾರಿ ತಪ್ಪುಗಳಾಗಿರುವ ವಿಚಾರವನ್ನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಬಿ. ಸಂಜೀವಯ್ಯ ಶೆಟ್ಟಿ (ವಿದ್ಯಾ ಶಾಖೆಯ ಮಂತ್ರಿಗಳು).— ಸ್ವಾಮಿ ನನ್ನ ಹೇಳಿಕೆ ಈ ರೀತಿ ಇದೆ. ಮಾನ್ಯ ಸದಸ್ಯರು ಬೆಂಗಳೂರು ನಗರ ಜಿಲ್ಲೆಯ ಉತ್ತರ ವಿಭಾಗದ ೭ನೇ ತರಗತಿ ಪ್ರಶ್ನೆ ಪತ್ರಿಕೆಗಳಲ್ಲಿ ಪ್ರಧಾನವಾಗಿ ಸಾಮಾನ್ಯ ವಿಜ್ಞಾನ, ಗಣಿತ, ಇಂಗ್ಲೀಷ್ ಮತ್ತು ಕನ್ನಡ ಪ್ರಶ್ನೆ ಪತ್ರಿಕೆಗಳಲ್ಲಿ ಪ್ರಮುಖ ದೋಷಗಳಿದ್ದು, ಒಟ್ಟು ಅಂಕಗಳು ೧೦೦ಕ್ಕೆ ಕಡಿಮೆ ಎಂದು ತೋರಿಸಲಾಗಿದೆ ಎಂದು ಮತ್ತು ಸುಮಾರು ೭೫ ರಿಂದ ೮೦ ಅಂಕಗಳಿಗೆ ಮಾತ್ರ ಪ್ರಶ್ನೆಗಳನ್ನು ಕೊಟ್ಟಿರುವುದರಿಂದ ಎಳೆಯ ವಿದ್ಯಾರ್ಥಿಗಳ ಫಲಿತಾಂಶದ ಮೇಲೆ ತೀವ್ರ ಪರಿಣಾಮವುಂಟಾಗಿ ತೊಂದರೆಯಾಗಿರುವ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯ ಉತ್ತರ ವಿಭಾಗದ ೭ನೇ ತರಗತಿಗೆ ಸಂಬಂದಪಟ್ಟ ಇಂಗ್ಲೀಷ್, ತಮಿಳು, ಉರ್ದು, ತೆಲುಗು, ಕನ್ನಡ ಮತ್ತು ಹಿಂದಿ ಹೀಗೆ ೬ ಭಾಷಾ ಮಾಧ್ಯಮದಲ್ಲಿ, ೩ ಮುಖ್ಯ ವಿಷಯಗಳಾದ ಸಮಾಜಶಾಸ್ತ್ರ, ಗಣಿತ ಮತ್ತು ವಿಜ್ಞಾನದ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ ಮುದ್ರಿಸಲಾಗಿತ್ತು.

ಗಣಿತ.—ಇಂಗ್ಲೀಷ್ ಮಾಧ್ಯಮದ ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ೫ನೇ ಪ್ರಶ್ನೆಗೆ ನಿಗದಿಯಾದ ೨೧ ಅಂಕಗಳು ಆಚ್ಚಾಗದೆ ಬಿಟ್ಟು ಹೋಗಿದ್ದುವು. ತಿದ್ದುಪಡಿಯನ್ನು ಕೂಡಲೇ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಸೂಪರಿಂಟಿಂಡೆಂಟ್ ಮೂಲಕ ತಿಳಿಯಪಡಿಸಲಾಯಿತು.

ವಿಜ್ಞಾನ.—ಇಂಗ್ಲೀಷ್ ಮಾಧ್ಯಮದ ಸಾಮಾನ್ಯ ವಿಜ್ಞಾನದ ಪ್ರಶ್ನೆ ಪತ್ರಿಕೆಯ ೭ನೇ ಪ್ರಶ್ನೆಗೆ ನಿಗದಿಯಾದ ೧೨ ಅಂಕಗಳು ಆಚ್ಚಾಗಿರಲಿಲ್ಲ. ಈ ಅಂಕಗಳನ್ನು ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಸೂಪರಿಂಟಿಂಡೆಂಟ್ ಮೂಲಕ ವಿದ್ಯಾರ್ಥಿಗಳೆಲ್ಲರಿಗೆ ತಿಳಿಯಪಡಿಸಲಾಯಿತು.

ಕನ್ನಡ.—ಕನ್ನಡ ಪ್ರಶ್ನೆ ಪತ್ರಿಕೆಯು ಒನೇ ಪ್ರಶ್ನೆಯ (ಎ) ಉಪ ಪ್ರಶ್ನೆಗೆ ನಿಗದಿಯಾದ ೪ ಅಂಕಗಳ ಬದಲಾಗಿ ೨ ಅಂಕಗಳೆಂದು ಮುದ್ರಿಸಲಾಗಿತ್ತು. ಈ ಸಣ್ಣ ದೋಷದ ಬಗ್ಗೆ ವಿದ್ಯಾರ್ಥಿಗಳಿಗೆ ಮೌಖಿಕ ಸೂಪರಿಂಟೆಂಡೆಂಟ್ ಮೂಲಕ ಸೂಕ್ತ ಸೂಚನೆ ಕೂಡಲೇ ಕೊಡಲಾಯಿತು.

ಇಂಗ್ಲೀಷ್.—ಇಂಗೀಷ್ ಮಾತೃ ಭಾಷೆಯೆಂದು ತೆಗೆದುಕೊಂಡ ೩೦೦೦ ವಿದ್ಯಾರ್ಥಿಗಳಿಗೆ, ಕಡ್ಡಾಯ ಇಂಗ್ಲೀಷ್ ಪ್ರಶ್ನೆ ಪತ್ರಿಕೆಯನ್ನು ತಪ್ಪಾಗಿ ದಿನಾಂಕ ೧೪ನೇ ಮಾರ್ಚ್ ೧೯೬೯ರಂದು ಹಂಚಲಾಯಿತು. ಈ ತಪ್ಪಿನ ಅರಿವಾದ ಕೂಡಲೇ ಪರೀಕ್ಷೆಯನ್ನು ೨೨ನೇ ಮಾರ್ಚ್ ೧೯೬೯ಕ್ಕೆ ಮುಂದೂಡ ಲಾಯಿತು. ಇದಲ್ಲದೇ ಈ ತಪ್ಪಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದು ಕೊಳ್ಳಲಾಗುತ್ತಿದೆ.

ಸಾಮಾನ್ಯ ವಿವರಣೆ.—ಪ್ರಶ್ನೆ ಪತ್ರಿಕೆಗಳಲ್ಲಿ ಮುದ್ರಣ ದೋಷಗಳು ಆಗಿರುವುದು ನಿಜ. ಈ ಲೋಪ ದೋಷಗಳಿಂದ ವಿದ್ಯಾರ್ಥಿಗಳ ಪರೀಕ್ಷೆ ಮತ್ತು ಫಲಿತಾಂಶದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ಸಂಬಂದಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಅಂಕಗಳು ಆಚ್ಚಾಗಿರಲಿಲ್ಲವೆಂದು ಹೇಳಿದ್ದಾರೆ. ಆದರೆ ೨೧ ಅಂಕಗಳಷ್ಟು ಪ್ರಶ್ನೆಗಳೇ ಆಚ್ಚಾಗಿರಲಿಲ್ಲವೆಂದು ಪತ್ರಿಕೆಗಳಲ್ಲಿ ಪ್ರಕಟಿಯಾಗಿತ್ತು. ಆದರೆ ಇಲ್ಲಿ ಪ್ರಶ್ನೆಗಳದ್ದವು, ಆದರೆ ಅಂಕಗಳು ಆಚ್ಚಾಗಿರಲಿಲ್ಲ, ಇದು ಮುದ್ರಣದೋಷವೆಂದು ಹೇಳಿದ್ದೀರಿ. ಅಂಕಗಳ ದೋಷವಾಗಿದ್ದರೆ ಅದನ್ನು ನಾವು ದೊಡ್ಡ ತಪ್ಪೆಂದು ಆಪಾದನೆ ಮಾಡಲು ನಮಗೆ ಅಧಿಕಾರವಿಲ್ಲ.

ಇನ್ನು ೩೦೦೦ ವಿದ್ಯಾರ್ಥಿಗಳಿಗೆ ಕಡ್ಡಾಯ ಇಂಗ್ಲೀಷ್ ಪ್ರಶ್ನೆ ಪತ್ರಿಕೆಯನ್ನು ತಪ್ಪಾಗಿ ಹಂಚಿದ ಕಾರಣ, ಅವರಿಗೆ ಪುನಃ ಅದೇ ತಿಂಗಳ ೨೨ನೇ ತಾರೀಖಿ ಪರೀಕ್ಷೆಯನ್ನು ನಡೆಸಲಾಯಿತೆಂಬ ತಪ್ಪನ್ನು ಇಲ್ಲಿ ಒಪ್ಪಿಕೊಂಡಿದ್ದೀರಿ. ಪರೀಕ್ಷೆಗಳಲ್ಲಿ ಈ ರೀತಿ ತಪ್ಪುಗಳಾಗುವುದು: ಈ ವಿದ್ಯಾ ಇಲಾಖೆಯ ಜಾಯಮಾನಕ್ಕೆ ಬಂದಿರುವ ಒಂದು ಪದ್ಧತಿಯಾಗಿಬಿಟ್ಟಿದೆ. ಇಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳುತ್ತೇವೆಂದು ಹೇಳಿದ್ದೀರಿ ಅಂದರೆ ಒಬ್ಬ ಗುಮಾಸ್ತರನ್ನು ಸಸ್ಪೆಂಡ್ ಮಾಡಿ, ನಂತರ ಶಿಕ್ಷೆ ವಿಧಿಸಿದರೆ ಅದು ಪರಿಹಾರವಲ್ಲ. ಇದೇ ಮತ್ತೆಮತ್ತೆ ನಡೆಯುತ್ತಿದೆ. ಕಳೆದ ವರ್ಷವೂ ನಡೆದಿದೆ. ಈ ಸಲವೂ ನಡೆದಿದೆ. ಆದಕಾರಣ ನೇರವಾಗಿ ಇದಕ್ಕೆ ಸಂಬಂಧಪಟ್ಟ ವರಿಷ್ಠ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಈ ರೀತಿ ಆಗುವುದರಿಂದ ಪರೀಕ್ಷೆಗೆ ಕೂರುವಂತಹ ವಿದ್ಯಾರ್ಥಿಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಆದಕಾರಣ ಇನ್ನು ಮುಂದೆ ಈ ರೀತಿ ಆಗದಿರುವಂತೆ ನೋಡುಕೊಳ್ಳುತ್ತೀರಾ?

ಶ್ರೀ ಪಿ. ರಾಮದೇವ್.—ಸ್ವಾಮಿ, ಈ ವಿಚಾರದಲ್ಲಿ ವಿದ್ಯಾಮಂತ್ರಿಗಳನ್ನು ವಿದ್ಯಾಧಿಕಾರಿಗಳು ತಪ್ಪುದಾರಿಗೆ ಎಳೆದಿದ್ದಾರೆಂದು ನಮ್ಮ ಮುಂದೆ ಹೇಳುತ್ತಿದ್ದೇನೆ. ಇದಕ್ಕೆ ಉದಾಹರಣೆ ಎಂದರೆ, ಇಲ್ಲಿ ಇಂಗ್ಲೀಷ್ ಮಾಧ್ಯಮದ ಗಣಿತ ಪ್ರಶ್ನೆಪತ್ರಿಕೆಯಲ್ಲಿ ೫ನೇ ಪ್ರಶ್ನೆಗೆ ನಿಗದಿಯಾದ ೨೧ ಅಂಕಗಳು ಆಚ್ಚಾಗದೆ ಬಿಟ್ಟು ಹೋಗಿದ್ದವು ಎಂದು ಇಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ನನ್ನ ಹತ್ತಿರ ಈ ಪ್ರಶ್ನೆ ಪತ್ರಿಕೆ ಇದೆ. ಇದರಲ್ಲಿ ೮ ಪ್ರಶ್ನೆಗಳನ್ನು ಕೇಳಿದ್ದಾರೆ. ಈ ೮ ಪ್ರಶ್ನೆಗಳಿಗೂ ಅಂಕಗಳನ್ನು ಪ್ರಶ್ನೆಗಳ ಮುಂದೆ ಬರೆದಿದ್ದಾರೆ. ಅದರ ಪ್ರಕಾರ ೫ನೇ ಪ್ರಶ್ನೆಗೆ ೧೨ ಅಂಕಗಳು ಎಂದು ಇಲ್ಲಿ ಆಚ್ಚಾಗಿದೆ. ಆದರೆ ಅಂಕಗಳು ಆಚ್ಚಾಗದೆ ಬಿಟ್ಟು ಹೋಗಿದ್ದುವು ಎಂದು ಇಲ್ಲಿ ಹೇಳಿದ್ದೀರಿ. ತಪ್ಪನ್ನು ಯಾವರೀತಿ ತಪ್ಪುದಾರಿಗೆಳೆಯುತ್ತಾರೆಂಬುದು ಇದರಿಂದಲೇ ತಿಳಿಯುತ್ತದೆ, ಜೊತೆಗೆ ಒಟ್ಟು ೮ ಪ್ರಶ್ನೆಗಳಿಗೆ ಸೇರಿದಂತೆ ಇಲ್ಲಿ ಒಟ್ಟು ೮೮ ಅಂಕಗಳೆಂದು ಇದೆ. ಇದನ್ನು ಸಹ ತಾವು ನೋಡಬೇಕು. ಈ ಪ್ರಶ್ನೆಪತ್ರಿಕೆಯನ್ನು ತಮಗೇ ಕಳುಹಿಸಿ ಕೊಡುತ್ತೇನೆ. ತಾವು ಬೇಕಾದರೆ ನೋಡಬಹುದು?

SRI MALLUR ANANDA RAO.—Then it becomes breach of Privilege of the House. The Hon. Minister for Education has made a false statement. ಸತ್ಯಕ್ಕೆ ದೂರವಾದ ಸಂಗತಿಯನ್ನು ಇಲ್ಲಿ ಹೇಳುವುದು ಉಚಿತವಲ್ಲ. ಈ ಬಗ್ಗೆ ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ಬಂದಿತ್ತು. ಆದರೆ ಮಾನ್ಯ ಮಂತ್ರಿಗಳಂ ಕೊಟ್ಟ ಸ್ಟೇಟ್‌ಮೆಂಟ್ ಓದಿದ ಮೇಲೆ I was also confused. ಇಲ್ಲಿ ಪ್ರತಿ ಪ್ರಶ್ನೆ ಪತ್ರಿಕೆಗಳಲ್ಲಿ ಕೊಟ್ಟಿರುವ ಅಂಕಿಗಳನ್ನು ಕೂಡಿದರೆ ೮೫ ಇಲ್ಲವೇ ೮೮ ಬರುತ್ತದೆ. ಈ ಕಾರಣದಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಈ ರೀತಿ ಅನ್ಯಾಯವಾಗಿರುವ

ಪಶ್ನ ವಿದ್ಯಾಧಿಕಾರಿಗಳು ವಿದ್ಯಾಮಂತ್ರಿಗಳಿಗೆ ಗಡಿಬಿಡಿ ಮಾಡಿದ್ದಾರೆ. ಒಟ್ಟಿನಲ್ಲಿ ಮಾನ್ಯ ಮಂತ್ರಿಗಳು ಈ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಆದಕಾರಣ ನಾವು ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ. ಬೇಕಾದರೆ ಮಾನ್ಯ ಮಂತ್ರಿಗಳು ತಮ್ಮ ತಪ್ಪನ್ನು ತಿದ್ದುಕೊಂಡು ನಾಳೆ ಸ್ಟೇಟ್‌ಮೆಂಟ್ ಮಾಡಲಿ, ಇಲ್ಲವೇ ಈ ದಿನದ ಕೊನೆಯಲ್ಲಿ ಮಾಡಲಿ, ಆದರೆ ಈ ಸದನವನ್ನು ತಪ್ಪುದಾರಿಗೆ ಎಳೆಯುವುದು ಸರಿಯಲ್ಲ. ಈ ವಿಷಯದಲ್ಲಿ ಮಾನ್ಯ ಸುಬ್ಬಯ್ಯಶೆಟ್ಟರು ತಪ್ಪು ಮಾಡುವುದು ಬೇಡ. ನಾವು ಹೇಳಿದರೆ ಈಗಲೇ ಪ್ರಿವಿಲೇಜ್ ಮೋಷನನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಪಿ. ರಾಂದೇವ್.—ಇನ್ನು ಇಂಗ್ಲಿಷ್ ಮಾಧ್ಯಮದ ಗಣಿತ ಪ್ರಶ್ನೆಪತ್ರಿಕೆಯಲ್ಲಿ ಏನೇ ಪ್ರಶ್ನೆಗೆ ನಿಗದಿಯಾದ ೨೧ ಅಂಕಗಳು ಆಚ್ಚಾಗದೆ ಬಿಟ್ಟುಹೋಗಿದ್ದವು ಎಂದು ತಿಳಿಸಿದ್ದೀರಿ. ಅದು ಸರಿಯಲ್ಲ. ಆಮೇಲೆ ಹೈಯರ್ ಇಂಗ್ಲಿಷ್ ಬಗ್ಗೆ ನಾವು ಯಾಕೆ ಏನೂ ಹೇಳಲಿಲ್ಲ. ಹೈಯರ್ ಇಂಗ್ಲಿಷ್ ಪ್ರಶ್ನೆಪತ್ರಿಕೆಯಲ್ಲಿ ಕೇವಲ ೭೮ ಮಾರ್ಕ್ಸ್ ಹಾಕಿದ್ದಾರೆ. ಆದರೆ ಅದರ ಮೇಲ್ಗಡೆ ೧೦೦ ಅಂಕಗಳು ಎಂದು ಆಚ್ಚಾಗಿದೆ. ಎಲ್ಲಾ ಒಂಭತ್ತು ಪ್ರಶ್ನೆಗೂ ಮಾರ್ಕ್ಸ್ ಹಾಕಿದ್ದಾರೆ. ಎಲ್ಲವನ್ನೂ ಜೋಟಲ್ ಮಾಡಿದರೆ ೭೮ ಅಂಕಗಳು ಮಾತ್ರ ಬರುತ್ತದೆ. ನಾವು ಕೊಟ್ಟಿರತಕ್ಕ ಉತ್ತರದಲ್ಲಿ ಈ ವಿಚಾರ ಇಲ್ಲ. ನಿಮ್ಮ ಉತ್ತರದಲ್ಲಿ ಹೈಯರ್ ಇಂಗ್ಲಿಷ್ ಬಗ್ಗೆ ಒಂದು ಚಕಾರವೂ ಇಲ್ಲಿ ಹೇಳಿಲ್ಲ. ಈ ರೀತಿ ಮಿಸ್‌ಲೀಡ್ ಮಾಡತಕ್ಕದ್ದು ಸರಿಯಲ್ಲ.

ಇನ್ನು ಮೂರನೆಯದಾಗಿ, ಈ ಪರೀಕ್ಷೆಯ ಬಗ್ಗೆ ನಿಮ್ಮ ಡೈರೆಕ್ಟರ್ ಅವರು ಬಹಳ ಲಘುವಾಗಿ ಹಾಗೂ ಹಗುರವಾಗಿ ತೆಗೆದುಕೊಂಡಿದ್ದಾರೆ, ಮೊನ್ನೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ, ಒಬ್ಬ ಪೇರೆಂಟ್ ನಿಮ್ಮ ಮೂರು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವಂತಹ ಡೈರೆಕ್ಟರರವರ ಬಳಿಗೆ ಹೋದಾಗ ಬಹಳ ಉದ್ಧಟತನದಿಂದ ಮಾತನಾಡಿದ್ದಾರೆ. ಆದ್ದರಿಂದ ನಾವು ಇಡೀ ವಿದ್ಯಾ ಇಲಾಖೆಯನ್ನೇ ಫುಲ್ ಆಪ್ ಮಾಡಬೇಕು. ಏಳನೇ ತರಗತಿಯ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಮೊದಲನೇ ಸಾರಿ ಪಬ್ಲಿಕ್ ಪರೀಕ್ಷೆಗೆ ಕುಳಿತುಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ಇಷ್ಟು ಗೊಂದಲವಾದಾಗ ಆ ಇಲಾಖೆಗೆ ಮಕ್ಕಳನ್ನು ಪರೀಕ್ಷೆ ಮಾಡತಕ್ಕ ಸಾಮರ್ಥ್ಯ ಇದೆಯೆ ? ಉತ್ತರ ಕೊಡಿ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಸ್ವಾಮಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಮಳ್ಳೂರು ಆನಂದರಾವ್ ಅವರು ಹಾಗೂ ಶ್ರೀ ಪಿ. ರಾಮದೇವ್ ಅವರು ಮಾತನಾಡುತ್ತಾ ಅವರು ಈ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಅದನ್ನೇ ಒಂದು ಪ್ರಿವಿಲೇಜ್ ಇಷ್ಯೂ ಆಗುತ್ತದೆ ಎಂದು ಮಾತನಾಡಿದರು. ನಾನು ಮಾತನಾಡಿದ್ದರಲ್ಲಿ ಯಾವ ತಪ್ಪೂ ಇಲ್ಲ. ಇದರಲ್ಲಿ ಇಂಗ್ಲಿಷ್ ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ನಾಲ್ಕನೇ ಪ್ರಶ್ನೆಗೆ ಮೇಲೆ ೧೨ ಅಂಕಗಳು ಎಂದು ಹಾಕಿದ್ದಾರೆ. ಆನಂತರ ತಪ್ಪು ಇದ್ದು ಐದನೇ ಪ್ರಶ್ನೆಗೆ ಮಾರ್ಕ್ಸ್ ಹಾಕುವುದನ್ನು ಕೈಬಿಟ್ಟಿದ್ದಾರೆ. ನಾಲ್ಕನೇ ಪ್ರಶ್ನೆಯ ಐದನೇ ಉಪ ಪ್ರಶ್ನೆಗೆ ೧೨ ಎಂದು ಹಾಕಿದ್ದಾರೆ. ಏನೇ ಪ್ರಶ್ನೆಗೆ ಅಂಕಗಳನ್ನು ಹಾಕಿಲ್ಲ. ಆದಕ್ಕೆ ಐದನೇ ಪ್ರಶ್ನೆಗೆ ೨೧ ಮಾರ್ಕ್ಸ್ ಎಂದು ಆಚ್ಚು ಆಗಿಲ್ಲ. ಯಾವ ಪ್ರಶ್ನೆಗೂ ಸಂಬಂಧಪಡದೆ ೧೨ ಅಂಕ ಎಂದು ಬಿದ್ದಿದೆ ಇದು ಮುದ್ರಾರಾಕ್ಷಸನ ತಪ್ಪು ಎಂದು ಕಾಣುತ್ತದೆ. ಅದು ಸ್ವಲ್ಪ ಕೆಳಗಡೆ ೨೧ ಎಂದು ಬೇಳಬೇಕಾಗಿತ್ತು. ಮೊದಲನೇ ಪ್ರಶ್ನೆಗೆ ಸಂಬಂಧಪಟ್ಟದ್ದು ೧೨ ಎಂದು ಬಿದ್ದಿದೆ. ಅದು ತಪ್ಪು ಇದೆ ಎಂದು ಹೇಳಿದ್ದಾರೆ. ಅದು ಸರಿಯಾದ ಮಾತಲ್ಲ. ಅವರು ಇನ್ನೊಂದು ಮಾತು ಹೇಳಿದ್ದಾರೆ. ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅಲ್ಲಿರತಕ್ಕ ಯಾರೋ ಒಬ್ಬ ಗುಮಾಸ್ತರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಿದರು. ಆದರೆ ಆ ಜವಾಬ್ದಾರಿ ಹೊತ್ತಿರತಕ್ಕ ಯಾರು ಸೆಕ್ರೆಟರಿ ಇದ್ದಾರೆ ಅವರ ಮೇಲೆ ತಕ್ಕ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ. ಅವರಿಗೆ ಎಕ್ಸ್‌ಪ್ಲನೇಷನ್ ಕಾಲ್‌ಫರ್ ಮಾಡಿದ್ದೇವೆ, ಅದು ಅವರಿಸಿದ ಬಂದಮೇಲೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಈ ವಿಷಯವನ್ನು ಒಂದು ಸಣ್ಣ ಸಂಗತಿಯೆಂದು ತಿಳಿದುಕೊಂಡಿದ್ದೇವೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ ನಾವು ಆ ರೀತಿ ಅದನ್ನು ತಿಳಿದುಕೊಂಡಿಲ್ಲ. ಪ್ರಶ್ನೆಪತ್ರಿಕೆಗಳ ಬಗ್ಗೆ ಬೆಟೆನ ನಿಗಾ ಇಟ್ಟು ನೋಡಿಕೊಳ್ಳುವುದು ಬಹಳ ಆಗತ್ಯ. ಆ ಪ್ರಕಾರ ಅವರು ನೋಡಿಕೊಳ್ಳದಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆಂದು ನಾನು ತಮ್ಮ ಮೂಲಕ ಈ ಸಭೆಗೆ ತಿಳಿಸಬಯಸುತ್ತೇನೆ.